₹ 5 @vishwavaninews epaper.vishwavani.news vishwavani.news ಬೆಂಗಳೂರು। ಹುಬ್ಬಳ್ಳಿ। ಮಂಗಳೂರು । ದಾವಣಗೆರೆ। ಕಲಬುರಗಿ। ಬೆಳಗಾವಿ ಗುರುವಾರ 25.11.2021 ಸಂಪುಟ: 6 ಸಂಚಿಕೆ: 330 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಂಬಿ ನೆನದು ಕಂಬನಿ ಮಿಡಿದ ಅಭಿಮಾನಿಗಳು

ಅಂಬರೀಶ್ ಪುಣ್ಯಸ್ಮರಣೆ

ಕಿಡ್ನಾಪ್ ಆದ ಕವಿತಾ ಗೌಡ ಗೋವಿಂದ ಗೋವಿಂದ

ಪುಟ ತೆರೆದಂತೆ

ಬಿಬಿಎಂಪಿ ಮುಖ್ಯ ಆಯುಕ್ತ, ಜೆಡಿಟಿಟಿ ವಿರುದ್ಧ ದೂರು ದಾಖಲು ಪುಟ→ 2

ಮನೆಮನೆಗೆ ಬರಲಿದೆ ಕೋವಿಡ್ ಲಸಿಕೆ ಪುಟ→ 3

ಸರಕಾರಿ ನುಂಗಣ್ಣರಿಗೆ ಎಸಿಬಿ ಅಧಿಕಾರಿಗಳ ಬಿಸಿ ಪುಟ→ 3

ಎನ್‌ಇಪಿಯಲ್ಲಿ ದೇಶಭಕ್ತಿ, ಮಾತೃಭಾಷೆ ಅಧ್ಯಯನಕ್ಕೂ ಅವಕಾಶ: ಗೆಹಲೋತ್ ಪುಟ→ 4

ಪರಿಷತ್ ಚುನಾವಣೆ: ಕಮಲ ಜತೆ ದಳ ಒಪ್ಪಂದ? ಪುಟ→ 5

ಮಾತಿನ ಮಹತ್ವವನ್ನು ಅರಿತು ಕೊಂಡ ಗುಬ್ಬಚ್ಚಿ ಪುಟ→ 8

ಮರವೊಂದು ಒಣಗಿರದರೆ ಹಕ್ಕಿ ಸಾಯುವುದಿಲ್ಲ! ಪುಟ→ 8

ಡಿಸೆಂಬರ್‌ನಲ್ಲಿ ಕರೊನಾ ಮಹಾ ಸ್ಫೋಟ ಪುಟ→ 13

ವಿಶ್ವ ಚಾಂಪಿಯನ್ನರೊಂದಿಗೆ ಭಾರತ ಕದನ ಇಂದು ಪುಟ→ 13

ಸಂ.ಗಮ 7

ಕಾಯಿದೆ ವಾಪಸು; ನಿಜವಾಗಿ ಸೋತವ ರೈತ!

ಸಂ.ಪುಟ 6

ನಾನ್ಯಾಕೆ ಯೂಟ್ಯೂಬ್ ಚಾನೆಲ್ ಮಾಡ್ಲಿಲ್ಲ

ನೂರೆಂಟು ವಿಶ್ವ ವಿಶ್ವೇಶ್ವರ ಭಟ್

ಗುರು
ಶಕ್ತಿಯ ಕೇಂದ್ರ ಬಿಂದುಗಳು
ತಪ್ಪಿನ ಅನುಭವದ ಮಾದರಿ ಪ್ರಗತಿಗೆ ಪೂರಕ ಹೆದ್ದಾರಿ

ದಾರಿದೀಪೋಕ್ತಿ

ನಿಮಗೆ ಗೊತ್ತಿಲ್ಲದಿದ್ದರೆ ಬೇರೆಯವರನ್ನು ಕೇಳಿ. ಸಹಮತವಿಲ್ಲದಿದ್ದರೆ ಚರ್ಚಿಸಿ, ಇಷ್ಟವಿಲ್ಲದಿದ್ದರೆ, ಮೆಲ್ಲಗೆ ಹೇಳಿ. ಅರ್ಥವಾಗದಿದ್ದರೆ, ತಿಳಿದುಕೊಳ್ಳಲು ಪ್ರಯತ್ನಿಸಿ. ಆದರೆ ನಿಮ್ಮಷ್ಟಕ್ಕೆ ಯಾವುದೋ ನಿರ್ಧಾರಕ್ಕೆ ಬರಬೇಡಿ, ಹಾಗೆ ಬೇರೆಯವರನ್ನು ಅಳೆಯಲೂ ಬೇಡ.

ವಕ್ರತುಂಡೋಕ್ತಿ

ಎಲ್ಲ ತಾಯಂದಿರೂ ತಮ್ಮ ಮಗನೇ ಬುದ್ದಿವಂತ ಎಂದು ಭಾವಿಸುತ್ತಾರೆ. ಆದರೆ ಆತ ಪತ್ನಿಯನ್ನು ಆರಿಸಿದಾಗ ಮಾತ್ರ ಹಾಗೆ ಅಂದುಕೊಳ್ಳುವುದಿಲ್ಲ.

ಭಿನ್ನವತ್ತಳೆ

ಮ್ಯಾಚ್ ಫಿಕ್ಸಿಂಗ್ ಖಾನ್

ಜಮೀರ್ ಭಾಯ್ ಸಲಾಂ ವಾಲೆಕುಂ

ಮತ್ತೆ ನಿಮ್ಮ ಬಾಯಲ್ಲಿ ಮ್ಯಾಚ್‌ಫಿಕ್ಸಿಂಗ್ ಮಾತು ಕೇಳಿಬರುತ್ತಿದೆಯಲ್ಲ, ನಿಮಗೆ ಕ್ರಿಕೆಟ್ ಅಂದ್ರೆ ತುಂಬಾ ಇಷ್ಟ ಅಂತ ಗೊತ್ತು. ನೀವು ಕ್ರಿಕೆಟರ್ ಆಗೋ ಬದಲು ರಾಜಕೀಯಕ್ಕೆ ಬಂದಿದ್ಯಾಕೆ ಅಂತ ಗೊತ್ತಾಗ್ಲಿಲ್ಲ. ಪ್ರತೀ ಚುನಾವಣೆ ಸಂದರ್ಭ ಯಾರ್‍ಯಾರು ಮ್ಯಾಚ್ ಫಿಕ್ಸಿಂಗ್ ಮಾಡಿದ್ದಾರೆ ಎಂಬುದು ನಿಮಗೆ ಅದ್ಹೇಗೆ ಗೊತ್ತಾಗುತ್ತೇ ಎಂಬುದೇ ಕನ್ಫ್ಯೂಸ್ ಆಗಿದೆ. ತಾನು ಕಳ್ಳ, ಪರರ ನಂಬ ಎಂಬ ಮಾತೇನಾದ್ರೂ ಇದಕ್ಕೆ ಲಿಂಕ್ ಆಗುತ್ತಾ? ನೀವು ಈ ಹಿಂದೆ ಕುಮಾರಸ್ವಾಮಿ ಜತೆ ಮ್ಯಾಚ್ ಫಿಕ್ಸ್ ಮಾಡಿಕೊಂಡಾಗ ಸಿದ್ರಾಮಣ್ಣನ ಹಿಗ್ಗಾಮುಗ್ಗಾ ಬೈತಿದ್ರಿ, ಈಗ ಡಿಕೆಶಿ ಜತೆ ಇದ್ದು ಸಿದ್ರಾಮಣ್ಣನ ವಿರುದ್ಧವೇ ನಿಮ್ಮ ಕಾರ್ಯಕರ್ತರನ್ನು ಛೂ ಬಿಡ್ತೀರಿ. ಪರಿಷತ್ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡಿದೆ ಅಂತಾ ಹೇಳುತ್ತಿದ್ದೀರಿ. ಜಮೀರ್ ಭಾಯ್ ಚುನಾವಣೆಗೂ ಮೊದಲೇ ಸೋಲೊಪ್ಪಿಕೊಂಡಿದ್ದಾರೆ ಅಂತಾ ಇಲ್ಲೆಲ್ಲೆ ನಗಾಡ್ತಾ ಇದ್ದಾರೆ. ಬಾಯಿಗೆ ಬಂದಂಗೆ ಮಾತಾಡ್ತೀರಿ. ಯಾಕೆ ಹೀಗೆ? ಮುಸ್ಲೀಮರ ಏಕೈಕ ಕಾಂಗ್ರೆಸ್ ನಾಯಕ ಎಂದು ಬಿಂಬಿಸಿಕೊಳ್ಳುತ್ತಿರುವ ನೀವು ಗಂಭೀರ ರಾಜಕಾರಣಿಯಾಗಬೇಕಿದೆ. ದಂಗೆ, ಗಲಭೆ, ಈ ಫಿಕ್ಸಿಂಗ್ ಮಾತು ಬಿಟ್ಟು ಸಮರ್ಥವಾಗಿ ಚುನಾವಣೆಗಳನ್ನು ಎದುರಿಸಿ, ಫ್ರಂಟ್‌ಲೈನ್ ರಾಜಕೀಯ ಮಾಡಿದ್ರೆ ನಿಮಗೆ ಉತ್ತಮ ಭವಿಷ್ಯವಿದೆ. ಇಲ್ಲವಾದರೆ ನಿಮ್ಮ ಸಮುದಾಯದ ಜನರೂ ನಿಮ್ಮನ್ನು ಸೇರಲಿಕ್ಕಿಲ್ಲ.

ಬಿರಾದರ್ ಮನೇಲಿ ಸಿನಿಮಿಯ ರೀತಿ ಪೈಪ್‌ನಿಂದ ಹಣ ತೆಗೆದ ಎಸಿಬಿ ಸಿಬ್ಬಂದಿ

ಗದಗದ ರುದ್ರೇಶಪ್ಪ ಮನೇಲಿ ಸಿಕ್ತು 9.4 ಕೆ.ಜಿ. ಮೌಲ್ಯದ ಚಿನ್ನದ ಬಿಸ್ಕೆಟ್‌ಗಳು

ಕಳ್ಳ ಕುಬೇರರ ಖಜಾನೆಗೆ ಬಂತು ಕುತ್ತು!

15 ಅಧಿಕಾರಿಗಳ ಮನೆಯಲ್ಲಿ 1.5 ಕೋಟಿ ನಗದು, ಕೋಟ್ಯಂತರ ಮೌಲ್ಯದ ಚಿನ್ನಾಭರಣ

68 ಸ್ಥಳಗಳಲ್ಲಿ ದಾಳಿ। ಕಾರ್ಯಾಚರಣೆಯಲ್ಲಿ ಎಸಿಬಿಯ 511 ಅಧಿಕಾರಿ, ಸಿಬ್ಬಂದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ವಿವಿಧೆಡೆ ಭ್ರಷ್ಟ ಅಧಿಕಾರಿಗಳ ಮೇಲೆ ಭ್ರಷ್ಟಚಾರ ನಿಗ್ರಹ ದಳ (ಎಸಿಬಿ)ದ ಅಧಿಕಾರಿಗಳು ಬುಧವಾರ ಮುಗಿಬಿದ್ದಿದ್ದಾರೆ. ಬೆಳ್ಳಂಬೆಳಗ್ಗೆ ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳ 15 ಸರಕಾರಿ ಅಧಿಕಾರಿಗಳ ಮನೆ ಮತ್ತು ಆಪ್ತರ ಮನೆಗಳ ಮೇಲೆ ದಾಳಿ ನಡೆಸಿ ಸುಮಾರು ಒಂದೂವರೆ ಕೋಟಿಯಷ್ಟು ನಗದು, ಕೋಟ್ಯಂತರ ಮೌಲ್ಯದ ಚಿನ್ನಾಭರಣ ಹಾಗೂ ಆಸ್ತಿ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ದಾಳಿಯ ವೇಳೆ ಕಲಬುರ್ಗಿಯ ಪಿಡಬ್ಲ್ಯುಡಿ ಜೆ.ಇ ಬಿರಾದರ್ ಮನೆಯ ಹೊರಗಿನ ಡ್ರೈನೇಜ್ ಪೈಪ್‌ನಲ್ಲಿ ಇರಿಸಲಾಗಿದ್ದ 500 ರು. ಮುಖ ಬೆಲೆಯ 13.5 ಲಕ್ಷ, ವಾಲ್ ಸೀಲಿಂಗ್‌ನಲ್ಲಿದ್ದ 6 ಲಕ್ಷ ನಗದು ಹಾಗೂ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರುದ್ರೇಶಪ್ಪ ಅವರ ಮನೆಯಲ್ಲಿ ಒಂಬತ್ತು ಕೆಜಿಗೂ ಅಧಿಕ ಚಿನ್ನದ ಗಟ್ಟಿಗಳು ಸಿಕ್ಕಿವೆ.

ಇತರೆ ಅಧಿಕಾರಿಗಳ ಮನೆಯಲ್ಲಿ ಕೋಟ್ಯಂತರ ರುಪಾಯಿ ನಗದು, ಆಸ್ತಿ ಪತ್ರ ದಾಖಲೆಗಳು, ಕೆಜಿಗಟ್ಟಲೆ ಚಿನ್ನಾಭರಣಗಳು ಪತ್ತೆಯಾಗಿವೆ.

511 ಅಧಿಕಾರಿ, ಸಿಬ್ಬಂದಿಯಿಂದ ಏಕಕಾಲಕ್ಕೆ ದಾಳಿ: ಬುಧವಾರ ಬೆಳಗ್ಗೆ ಸುಮಾರು 5.30ರ ಸುಮಾರಿಗೆ ರಾಜ್ಯಾದ್ಯಂತ ಏಕಕಾಲಕ್ಕೆ 68 ಸ್ಥಳಗಳ ಮೇಲೆ ಎಸಿಬಿ ಅಧಿಕಾರಿಗಳು, ಸಿಬ್ಬಂದಿ ದಾಳಿ ನಡೆಸಿದ್ದಾರೆ. ತಡರಾತ್ರಿಯವರೆಗೆ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ. 8 ಪೊಲೀಸ್ ವರಿಷ್ಠಾಧಿಕಾರಿಗಳು, 503 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ 68 ತಂಡಗಳ ಮೂಲಕ ಈ ಬೃಹತ್ ಕಾರ್ಯಾಚರಣೆ ನಡೆಸಿದ್ದಾರೆ.

ಸೂಕ್ತ ದಾಖಲೆಗಳನ್ನು ಒದಗಿಸಲು ಸೂಚನೆ: ಎಸಿಬಿ ದಾಳಿಗೊಳಗಾದ ಸರಕಾರಿ ನೌಕರರ ಆಸ್ತಿಗಳ ಮೌಲ್ಯ, ಅವರು ಹೊಂದಿರುವ ಚಿನ್ನಾಭರಣ, ಇತರೆ ಬ್ಯಾಂಕ್ ಠೇವಣಿಗಳ ಕುರಿತು ತನಿಖೆ ಕೈಗೊಂಡಿದ್ದು, ದಾಖಲೆಗಳ ಪರಿಶೀಲನೆ ಕಾರ್ಯ ಮುಂದುವರಿಸಲಾಗಿದೆ. ದಾಳಿ ವೇಳೆ ಲಭ್ಯವಾಗಿರುವ ನಗದು, ಚಿನ್ನಾಭರಣ, ಆಸ್ತಿ ಪತ್ರಗಳನ್ನು ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ. ಗಳಿಕೆ ಮಾಡಿರುವ ಆಸ್ತಿಗೆ ಸೂಕ್ತ ದಾಖಲೆಗಳನ್ನು ಒದಗಿಸಿ ವಾಪಸ್ ತೆಗೆದುಕೊಂಡು ಹೋಗುವಂತೆ ಸೂಚಿಸಲಾಗಿದೆ.

ಇದಲ್ಲದೆ, ಮನೆಯಲ್ಲಿ ಸಿಕ್ಕ ನಗದಿನ ಮೂಲದ ಬಗ್ಗೆ ಸಂಬಂಧಿಸಿದವರನ್ನು ಭ್ರಷ್ಟಚಾರ ನಿಗ್ರಹ ದಳ ಅಧಿಕಾರಿಗಳು ಪ್ರಶ್ನಿಸಿದ್ದಾರೆ. ನಿವೇಶನಗಳು, ಆಸ್ತಿಗಳ ಖರೀದಿ ಸಂಬಂಧ ಸೂಕ್ತ ದಾಖಲೆಗಳನ್ನು ನೀಡುವಂತೆ ಸೂಚಿಸಲಾಗಿದೆ. ಕಾನೂನು ಬದ್ಧ ದಾಖಲೆಗಳನ್ನು ಎಸಿಬಿ ಕಚೇರಿಗೆ ತಂದು ವಿವರಣೆ ನೀಡುವಂತೆ ನಿರ್ದೇಶನ ನೀಡಲಾಗಿದೆ ಎಂದು ಎಸಿಬಿ ಮೂಲಗಳು ತಿಳಿಸಿವೆ.

ದೊಡ್ಡಬಳ್ಳಾಪುರ ಜಿಲ್ಲೆಯ ಕಸಬಾ ವ್ಯಾಪ್ತಿಯ ರಾಜಸ್ವ ನಿರೀಕ್ಷಕ ಲಕ್ಷ್ಮೀನರಸಿಂಹ ಅವರ ಮನೆಯಲ್ಲಿ ದಾಖಲೆ ಪತ್ರಗಳನ್ನು ಪರಿಶೀಲಿಸುತ್ತಿರುವ ಅಧಿಕಾರಿಗಳು.

ಕಲಬುರಗಿಯ ಗುಬ್ಬಿ ಕಾಲೊನಿಯಲ್ಲಿರುವ ಲೋಕೋಪಯೋಗಿ ಇಲಾಖೆ ಜೇವರ್ಗಿ ಉಪ ವಿಭಾಗದ ಕಿರಿಯ ಎಂಜಿನಿಯರ್ ಶಾಂತ ಗೌಡ ಬಿರಾದಾರ ಅವರ ಮನೆಯ ಪೈಪ್ ಕತ್ತರಿಸಿ ಎಸಿಬಿ ಅಧಿಕಾರಿಗಳು ₹ 5 ಲಕ್ಷಕ್ಕೂ ಅಧಿಕ ಹಣದ ಕಟ್ಟುಗಳನ್ನು ಹೊರ ತೆಗೆದಿದ್ದಾರೆ.

ಯಾರ್‍ಯಾರ ಮನೆಯಲ್ಲಿ, ಏನೇನು ಪತ್ತೆಯಾಗಿದೆ ಗೊತ್ತಾ?

ಎಸ್.ಎಂ.ಬಿರಾದರ್

ಲೋಕೋಪಯೋಗಿ ಕಿರಿಯ ಎಂಜಿನಿಯರ್, ಜೇವರ್ಗಿ

ಕಲಬುರಗಿಯಲ್ಲಿ 2 ಮನೆ, ಬೆಂಗಳೂರಲ್ಲಿ 1 ನಿವೇಶನ, 3 ವಿವಿಧ ಕಾರುಗಳು, 1 ದ್ವಿಚಕ್ರ ವಾಹನ, 1 ಸ್ಕೂಲ್ ಬಸ್, 2 ಟ್ರ್ಯಾಕ್ಟರ್, 54.50 ಲಕ್ಷ ನಗದು, 100 ಗ್ರಾಂ ಚಿನ್ನಾಭರಣ, 36 ಎಕರೆ ಕೃಷಿ ಜಮೀನು, 15 ಲಕ್ಷ ರು. ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಆರ್.ಎನ್.ವಾಸುದೇವ್

ಮಾಜಿ ಯೋಜನಾ ನಿರ್ದೇಶಕ, ನಿರ್ಮಿತಿ ಕೇಂದ್ರ, ಬೆಂ.ಗ್ರಾಮಾಂತರ ಜಿಲ್ಲೆ

ಬೆಂಗಳೂರಲ್ಲಿ 5 ವಾಸದ ಮನೆ, 8 ನಿವೇಶನ, ನೆಲಮಂಗಲದ ಸೋಂಪುರದಲ್ಲಿ 4 ಮನೆ, ನೆಲಮಂಗಲ, ಮಾಗಡಿಯಲ್ಲಿ 10.20 ಗುಂಟೆ ಜಮೀನು, 850 ಗ್ರಾಂ ಚಿನ್ನಾಭರಣ, 9.500 ಕೆ.ಜಿ. ಬೆಳ್ಳಿ, 15 ಲಕ್ಷ ನಗದು, 98 ಲಕ್ಷದ ಗೃಹೋಪಯೋಗಿ ವಸ್ತುಗಳು.

ಎಲ್.ಸಿ.ನಾಗರಾಜ್,

ಆಡಳಿತಾಧಿಕಾರಿ, ಸಕಾಲ ಮಿಷನ್, ಬೆಂಗಳೂರು

ಬೆಂಗಳೂರಲ್ಲಿ 1 ಮನೆ, ನಿವೇಶನ, ನೆಲಮಂಗದಲ್ಲಿ 1 ಮನೆ, 11.26 ಎಕರೆ ಜಮೀನು, 1 ಕೈಗಾರಿಕಾಕಟ್ಟಡ, 3 ಕಾರು, 1.76 ಕೆಜಿ ಆ ಭರಣ, 7 ಕೆಜಿಬೆಳ್ಳಿ, 43 ಲಕ್ಷ ನಗದು, 14 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತು.

ಕೆ.ಎಸ್.ಲಿಂಗೇಗೌಡ

ಎಕ್ಸಿಕ್ಯುಟಿವ್ ಎಂಜಿನಿಯರ್, ಸ್ಮಾರ್ಟ್‌ಸಿಟಿ, ಮಂಗಳೂರು

ಮಂಗಳೂರಲ್ಲಿ 1 ಮನೆ, ಚಾಮರಾಜನಗರ, ಮಂಗಳೂರಲ್ಲಿ 3 ನಿವೇಶನಗಳು, 2 ವಿವಿಧ ಕಂಪನಿಯ ಕಾರ್‌ಗಳು, 1 ದ್ವಿಚಕ್ರ ವಾಹನ, 1 ಕೆ.ಜಿ. ಬೆಳ್ಳಿ ಆಭರಣಗಳು, 10 ಲಕ್ಷ ರು. ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಕೆ.ಶ್ರೀನಿವಾಸ್

ಕಾರ್ಯಪಾಲಕ ಎಂಜಿನಿಯರ್, ಎಚ್‌ಎಲ್‌ಐಸಿ-3, ಕೆ.ಆರ್.ಪೇಟೆ

ಮೈಸೂರಲ್ಲಿ 1 ಮನೆ, 1 ಫ್ಲಾಟ್, 2 ನಿವೇಶನ, ಹಲವೆಡೆ 4.34 ಎಕರೆ ಜಮೀನು, ನಂಜನಗೂಡಲ್ಲಿ 1 ಫಾರ್ಮ್‌ಹೌಸ್, 2 ಕಾರು, 2 ದ್ವಿಚಕ್ರ ವಾಹನ, 1 ಕೆ.ಜಿ. ಆಭರಣ, 8.840 ಕೆ.ಜಿ. ಬೆಳ್ಳಿ ಸಾಮಾನು, 9.85 ಲಕ್ಷ ನಗದು, ವಿವಿಧ ಬ್ಯಾಂಕ್‌ಗಳಲ್ಲಿ 22 ಲಕ್ಷ ಠೇವಣಿ, 8 ಲಕ್ಷ ರು. ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಅಡವಿಸಿದ್ದೇಶ್ವರ ಕಾರೆಪ್ಪ ಮಸ್ತಿ

ಅಭಿವೃದ್ಧಿ ಅಧಿಕಾರಿ, ಸಹಕಾರ ಇಲಾಖೆ, ರಾಯಭಾಗ್

ಬೈಲಹೊಂಗಲದಲ್ಲಿ 2 ವಾಸದ ಮನೆ, 4 ನಿವೇಶನಗಳು, 4 ಕಾರುಗಳು, 6 ದ್ವಿಚಕ್ರ ವಾಹನಗಳು, 263 ಗ್ರಾಂ ಆಭರಣ, 945 ಗ್ರಾಂ ಬೆಳ್ಳಿ, 1.50 ಲಕ್ಷ ರು. ಬ್ಯಾಂಕ್ ಡೆಪಾಸಿಟ್ ಮತ್ತು ಷೇರ್‌ಗಳು, 1.10 ಲಕ್ಷ ನಗದು. 5 ಲಕ್ಷ ರು. ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಎಸ್.ಎಸ್. ರಾಜಶೇಖರ್

ಫಿಸಿಯೋಥೆರಪಿಸ್ಟ್, ಬೆಂಗಳೂರು

ಮಾರಸಂದ್ರದಲ್ಲಿ 1 ಫ್ಲಾಟ್, ಶಿವನಹಳ್ಳಿಲಿ 1 ಫ್ಲಾಟ್, ತಳ ಮಹಡಿಯಲ್ಲಿ ಖಾಸಗಿ ಆಸ್ಪತ್ರೆ, ಮೈಲನಹಳ್ಳಿಯಲ್ಲಿ 1 ನಿವೇಶನ, 1 ಕಾರ್, 1 ದ್ವಿಚಕ್ರ ವಾಹನ, 4 ಲಕ್ಷ ರುಪಾಯಿ. ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಮಾಯಣ್ಣ

ಪ್ರಥಮ ದರ್ಜೆ ಸಹಾಯಕ, ಬಿಬಿಎಂಪಿ ಕೇಂದ್ರ ಕಚೇರಿ, ಬೆಂಗಳೂರು

ಬೆಂಗಳೂರಲ್ಲಿ 4 ಮನೆ, 6 ನಿವೇಶನ, 2 ಎಕರೆ ಜಮೀನು, 2 ದ್ವಿಚಕ್ರ ವಾಹನ, 1 ಕಾರು, 59 ಸಾವಿರ ನಗದು, 10 ಲಕ್ಷ ರು. ನಿಶ್ಚಿತ ಠೇವಣಿ, ಎಸ್‌ಬಿಖಾತೆಯಲ್ಲಿ 1.50 ಲಕ್ಷ, 600 ಗ್ರಾಂ ಆಭರಣ, 3ಸ್ಥಳಗಳಲ್ಲಿ ಬೇನಾಮಿ ಆಸ್ತಿ, 12 ಲಕ್ಷ ರು. ಮೌಲ್ಯದ ಬೆಲೆ ಬಾಳುವ ಗೃಹಯೋಪಯೋಗಿ ವಸ್ತುಗಳು.

ಟಿ.ಎಸ್.ರುದ್ರೇಶಪ್ಪ

ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಗದಗ

ಶಿವಮೊಗ್ಗದಲ್ಲಿ 2 ಮನೆ, ವಿವಿದೆಡೆ 4 ನಿವೇಶನಗಳು, 9.4 ಕೆ.ಜಿ. ಚಿನ್ನದ ಬಿಸ್ಕತ್ತು ಮತ್ತು ಆಭರಣ, 3 ಕೆ.ಜಿ. ಬೆಳ್ಳಿ,2 ಕಾರುಗಳು, ಮೂರು ದ್ವಿಚಕ್ರ ವಾಹನಗಳು, 8 ಎಕರೆ ಜಮೀನು, 15.94 ಲಕ್ಷ ನಗದು, 20 ಲಕ್ಷ ರುಪಾಯಿ ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಜಿ.ವಿ.ಗಿರಿ

ಗ್ರೂಪ್ ಡಿ ನೌಕರ, ಬಿಬಿಎಂಪಿ, ಬೆಂಗಳೂರು

ಬೆಂಗಳೂರಲ್ಲಿ 6 ಮನೆಗಳು, 4 ಕಾರುಗಳು, 4 ದ್ವಿಚಕ್ರ ವಾಹನಗಳು, 8 ಕೆ.ಜಿ. ಬೆಳ್ಳಿ, 1.18 ಲಕ್ಷ ನಗದು, 15 ಲಕ್ಷ ರು. ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಬಿ.ಕೃಷ್ಣಾರೆಡ್ಡಿ

ಪ್ರಧಾನ ವ್ಯವಸ್ಥಾಪಕ, ನಂದಿನಿ, ಬೆಂಗಳೂರು

ಹಲವೆಡೆ 3 ಮನೆಗಳು, 9 ನಿವೇಶನ, ಚಿಂತಾಮಣಿ ವಿವಿಧೆಡೆ 5.30 ಎಕರೆ ಜಮೀನು, ಹೊಸಕೋಟೇಲಿ 1 ಪೆಟ್ರೋಲ್ ಬಂಕ್, 383 ಗ್ರಾಂ ಆಭರಣ, 3.395 ಕೆ.ಜಿ. ಬೆಳ್ಳಿ, 3 ಲಕ್ಷ ನಗದು.

ನಾಥಾಜಿ ಪೀರಾಜಿ ಪಾಟೀಲ

ಲೈನ್ ಮೆಕಾನಿಕ್ ಗ್ರೇಡ್-2, ಹೆಸ್ಕಾಂ, ಬೆಳಗಾರ

ಬೆಳಗಾವಿಯಲ್ಲಿ 1 ಮನೆ, 2 ನಿವೇಶನ, 1 ಕಾರು, 1 ವಾಹನ, 239 ಗ್ರಾಂ ಆಭರಣ, 1.803 ಕೆ.ಜಿ. ಬೆಳ್ಳಿ, 38 ಸಾವಿರ ನಗದು, ₹20 ಲಕ್ಷದ ಗೃಹೋಪಯೋಗಿ ವಸ್ತು.

ಕೆ.ಎಸ್. ಶಿವಾನಂದ್

ಸಬ್-ರಿಜಿಸ್ಟ್ರಾರ್ (ನಿವೃತ್ತ), ಬಳ್ಳಾರಿ

ಮಂಡ್ಯದಲ್ಲಿ 1 ಮನೆ, ಬೆಂಗಳೂರಲ್ಲಿ 1 ನಿವೇಶನ, 1 ಕಾರು, 2 ದ್ವಿಚಕ್ರ ವಾಹನ, ಶಕ್ರಾಪುರದಲ್ಲಿ 1 ವಾಣಿಜ್ಯ ಸಂಕೀರ್ಣ, ಬಳ್ಳಾರಿಯ ಮೋಕಾ ಗ್ರಾಮದಲ್ಲಿ 7 ಎಕರೆ ಜಮೀನು, 8 ಲಕ್ಷ ರು. ಗೃಹೋಪಯೋಗಿ ವಸ್ತುಗಳು.

ಎಸ್. ಆರ್.ಮರಲಿಂಗಣ್ಣನವರ್

ಹಿರಿಯ ಮೋಟಾರು ನಿರೀಕ್ಷಕ, ಗೋಕಾಕ್, ಬೆಳಗಾವಿ

ಬೆಳಗಾವಿ ನಗರದಲ್ಲಿ 1 ವಾಸದ ಮನೆ, 22 ಎಕರೆ ಕೃಷಿ ಜಮೀನು, 1.135 ಕೆ.ಜಿ. ಚಿನ್ನಾಭರಣ, 8.22 ಲಕ್ಷ ನಗದು, 5 ಲಕ್ಷ ರು. ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಲಕ್ಷ್ಮೀನರಸಿಂಹಯ್ಯ

ರಾಜಸ್ವ ನಿರೀಕ್ಷಕ, ಕಸಬಾ -2, ದೊಡ್ಡಬಳ್ಳಾಪುರ

ಹಲವೆಡೆ 5 ಮನೆ, 6 ನಿವೇಶನಗಳು, ದೊಡ್ಡಬಳ್ಳಾಪುರದಲ್ಲಿ 25 ಗುಂಟೆ ಜಮೀನು, 765 ಗ್ರಾಂ ಆಭರಣ, 15 ಕೆ.ಜಿ. ಬೆಳ್ಳಿ, 1 ಕಾರು, 2 ವಾಹನ, 1.13 ಲಕ್ಷ ನಗದು.

ಗುಟ್ಕಾ ವಿತರಕನ ಬಳಿ 100 ಕೋಟಿ ಅಘೋಷಿತ ಆದಾಯ

ಅಹಮದಾಬಾದ್: ಗುಜರಾತ್ ಮೂಲದ ಗುಟ್ಕಾ ವಿತರಕರೊಬ್ಬರ ಆವರಣದಲ್ಲಿ ಆದಾಯ ತೆರಿಗೆ ಇಲಾಖೆ ನಡೆಸಿದ ಶೋಧದ ವೇಳೆ ರು. 100 ಕೋಟಿಗೂ ಹೆಚ್ಚು ಅಘೋಷಿತ ಆದಾಯ ಪತ್ತೆಯಾಗಿದೆ. ಗುಟ್ಕಾ ವಿತರಕರಿಗೆ ಸೇರಿದ ಕನಿಷ್ಠ 15 ಸ್ಥಳಗಳಲ್ಲಿ ಶೋಧ ನಡೆಸಲಾಗಿತ. ದಾಳಿ ವೇಳೆ ಸುಮಾರು ರು. 7.5 ಕೋಟಿ ಮೌಲ್ಯದ ಲೆಕ್ಕಕ್ಕೆ ಸಿಗದ ನಗದು ಹಾಗೂ 4 ಕೋಟಿ ಮೌಲ್ಯದ ಆಭರಣ ವಶಪಡಿಸಿಕೊಳ್ಳಲಾಗಿದೆ.

ಜಾಹೀರಾತಿನಲ್ಲಿ ಕ್ಯುಆರ್ ಕೋಡ್

ದೆಹಲಿ: ಪತ್ರಿಕೆಗಳು ಅಥವಾ ನಿಯತಕಾಲಿಕೆಗಳಿಗಾಗಿ ಕೇಂದ್ರ, ಸಚಿವಾಲಯಗಳು ಅಥವಾ ಸಾರ್ವಜನಿಕ ಉದ್ಯಮ ನೀಡುವ, ಮುದ್ರಣ ಮಾಧ್ಯಮಗಳಲ್ಲಿ ಪ್ರಕಟವಾಗುವ ಸರಕಾರಿ ಜಾಹೀರಾತುಗಳ ಜತೆ ಇನ್ಮುಂದೆ ಕ್ಯುಆರ್ ಕೋಡ್ ಇರಲಿದ್ದು, ಅದನ್ನು ಸ್ಕ್ಯಾನ್ ಮಾಡಿ ಕಿರು ವಿಡಿಯೊ ನೋಡಬಹುದು. ಯೋಜನೆಗಳು, ಸಾಧನೆಗಳು, ಕಲ್ಯಾಣ ಕಾರ್ಯಕ್ರಮಗಳು ಅಥವಾ ಮುದ್ರಣ ಜಾಹೀರಾತುಗಳಲ್ಲಿ ಪ್ರಚಾರ ಮಾಡುತ್ತಿರುವ ಕುರಿತು ಇನ್ನಷ್ಟು ಆಕರ್ಷಕವಾಗಿ ವಿವರಿಸಲಾಗಿರುತ್ತದೆ.

28ರವರೆಗೂ ತಪ್ಪಿದ್ದಲ್ಲ ಮಳೆ

ಬೆಂಗಳೂರು: ನವೆಂಬರ್ 28ರ ವರೆಗೂ ರಾಜ್ಯದ ಕೆಲವೆಡೆ ಮಳೆ ಮುಂದುವರಿಯಲಿದೆ. ನ.29ಕ್ಕೆ ರಾಜ್ಯಕ್ಕೆ ಮತ್ತೊಂದು ಚಂಡಮಾರುತದ ಭೀತಿ ಎದುರಾಗಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತ ಚಂಡಮಾರುತವಾಗಿ ರೂಪಾಂತರಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಒಳನಾಡಿನ ಬಹುತೇಕ ಕಡೆ ಇನ್ನೂ ಮೂರ್ನಾಲ್ಕು ದಿನಗಳ ಕಾಲ ಮಳೆ ಬೀಳುವ ಸಾಧ್ಯತೆಯಿದೆ.

ಚುನಾವಣೆಗೆ ವೀಕ್ಷಕರ ನೇಮಕ

ಬೆಂಗಳೂರು: ಡಿ.10ರಂದು ನಡೆಯಲಿರುವ ವಿಧಾನ ಪರಿಷತ್‌ನ ಚುನಾವಣೆ ಹಿರಿಯ ಐಎಎಸ್ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸಿ ಕೇಂದ್ರ ಚುನಾವಣಾ ಆಯೋಗ ಆದೇಶ ಹೊರಡಿಸಿದೆ. ರಾಕೇಶ್ ಸಿಂಗ್, ತುಷಾರ್ ಗಿರಿನಾಥ್, ಎಲ್.ಕೆ ಅತೀಕ್, ಮಣಿವಣ್ಣನ್, ರಾಕೇಶ್ ಸಿಂಗ್, ತುಷಾರ್ ಗಿರಿನಾಥ್, ಪಿ.ಸಿ.ಜಾಫರ್, ಎಲ್.ಕೆ.ಅತೀಕ್, ಏಕ್ ರೂಪ್ ಕೌರ್, ಎಸ್.ಸೆಲ್ವಕುಮಾರ್ ಸೇರಿ ದಂತೆ 20 ಐಎಎಸ್ ಅಧಿಕಾರಿಗಳು ಪಟ್ಟಿಯಲ್ಲಿದ್ದಾರೆ.

ಕೃಷಿ ಕಾಯಿದೆ: ಸಂಪುಟ ಅಸ್ತು

ದೆಹಲಿ: ಕೇಂದ್ರ ಸರಕಾರ ಜಾರಿಗೊಳಿಸಿದ ವಿವಾದಿತ ಮೂರು ಕೃಷಿ ಕಾಯಿದೆಗಳನ್ನು ರದ್ದುಗೊಳಿಸುವ ನೂತನ ಮಸೂದೆಗೆ ಕೇಂದ್ರ ಸಂಪುಟ ಸಭೆಯಲ್ಲಿ ಬುಧವಾರ ಅನುಮೋದನೆ ದೊರೆತಿದೆ. ನ.19ರಂದು ದೇಶವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ಮೋದಿ, ಕೇಂದ್ರ ಸರಕಾರದಿಂದ ಜಾರಿಗೆ ತರಲಾಗಿರುವ ಮೂರು ವಿವಾದಿತ ಕೃಷಿ ಕಾಯಿದೆಗಳನ್ನು ವಾಪಸ್ ಪಡೆಯುವುದಾಗಿ ಘೋಷಿಸಿ ದ್ದರು. ಬುಧವಾರ ನಡೆದ ಕೇಂದ್ರ ಸಂಪುಟ ಸಭೆಯಲ್ಲಿ ಕೃಷಿ ಕಾಯಿದೆ ರದ್ದುಗೊಳಿಸುವ ಪ್ರಮುಖ ಮಸೂದೆಯನ್ನು ಅಂಗೀಕರಿಸಲಾಗಿದೆ.

ಶೌಚಾಲಯಕ್ಕಾಗಿ ಸೂಸೂ ಪ್ರತಿಭಟನೆ

ಗದಗ: ಗದಗ-ಬೆಟಗೇರಿ ಅವಳಿ ನಗರದ ಸಾರ್ವಜನಿಕ ಮೂತ್ರಾಲಯಗಳನ್ನು ಸರಿಪಡಿಸುವಂತೆ ಆಗ್ರಹಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ನಗರಸಭೆ ಆವರಣ ದಲ್ಲಿ ಮೂತ್ರ ವಿಸರ್ಜಿಸಿ ಪ್ರದರ್ಶನ ನಡೆಸಿದ್ದಾರೆ. ಏಕಾಏಕಿ ಕಾರಿಡಾರ್‌ನಲ್ಲಿ ಬಂದು ಜಮಾಯಿಸಿದ ಪ್ರತಿಭಟನಾಕಾರರು ಅಲ್ಲೇ ಮೂತ್ರ ವಿಸರ್ಜಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲ ಹಾಗೂ ಗದಗ ಶಾಸಕ ಎಚ್.ಕೆ. ಪಾಟೀಲ ಸಾರ್ವಜನಿಕರಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲ ರಾಗಿದ್ದಾರೆ ಎಂದು ಅವರ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರ ಅನಾಗರಿಕ ವರ್ತನೆಗೆ ವಿರೋಧವೂ ವ್ಯಕ್ತವಾಗಿದೆ. ಸ್ಥಳದಲ್ಲಿ ಸಾಕಷ್ಟು ಪೊಲೀಸರು ಇದ್ದರೂ ಏನೂ ಮಾಡದೆ ಸುಮ್ಮನಾಗಿದ್ದಾರೆ.

ಸ್ವೀಡನ್‌ಗೆ ಮೊದಲ ಮಹಿಳಾ ಪ್ರಧಾನಿ

ಕೋಪನ್‌ಹೇಗನ್: ಸೋಷಿಯಲ್ ಡೆಮಾಕ್ರಟಿಕ್ ಪಕ್ಷದ ನಾಯಕಿ, ಹಣಕಾಸು ಸಚಿವೆ ಮ್ಯಾಗ್ಡಲೇನಾ ಆ್ಯಂಡರ್ಸನ್ ಅವರನ್ನು ಸ್ವೀಡನ್‌ನ ಮೊದಲ ಮಹಿಳಾ ಪ್ರಧಾನಿಯಾಗಿ ನೇಮಕ ಮಾಡಲು ಅಲ್ಲಿನ ಸಂಸತ್ತು ಅನುಮೋದನೆ ನೀಡಿದೆ. ಹೊಸ ಸರಕಾರ ರಚನೆಯಾಗುವ ವರೆಗೂ ಹಾಲಿ ಪ್ರಧಾನಿ ಸ್ಟೀಫನ್ ಲೋಫ್ವೆನ್ ಸರಕಾರವನ್ನು ಮುನ್ನಡೆಸಲಿದ್ದಾರೆ. ಈ ಬೆಳವಣಿಗೆಯು ಸ್ವೀಡನ್‌ನಲ್ಲಿ ಒಂದು ಮೈಲಿಗಲ್ಲು ಎನ್ನಲಾಗಿದೆ. ಲಿಂಗ ಸಂಬಂಧಿ ವಿಚಾರಗಳಲ್ಲಿ ಯುರೋಪಿನ ಅತ್ಯಂತ ಪ್ರಗತಿಪರ ರಾಷ್ಟ್ರಗಳಲ್ಲಿ ಒಂದಾಗಿರುವ ಸ್ವೀಡನ್‌ನಲ್ಲಿ ಇದುವರೆಗೆ ರಾಜಕೀಯದ ಉನ್ನತ ಹುದ್ದೆಯಲ್ಲಿನ ಮಹಿಳೆಯರಿಗೆ ಸ್ಥಾನ ದೊರೆತಿರಲಿಲ್ಲ.

ಮೇಲ್ಮನೆ ಅಭ್ಯರ್ಥಿಗಳೆಲ್ಲರೂ ಕೋಟಿ ವೀರರು

ಪರಿಷತ್ ಫೈಟ್

ಬೆಂಗಳೂರು: ಹಿರಿಯರ ಮನೆ ಎನಿಸಿಕೊಂಡಿರುವ ವಿಧಾನ ಪರಿಷತ್ ಇದೀಗ ಧನಿಕರ ಮನೆಯಾಗು ತ್ತಿದೆ. ಮೇಲ್ಮನೆ 25 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯ ಸ್ಪರ್ಧಾಳುಗಳಲ್ಲಿ ಒಬ್ಬರನ್ನು ಹೊರತುಪಡಿಸಿ ಉಳಿದ ಎಲ್ಲರೂ ಕೋಟ್ಯಧಿಪತಿಗಳು.

ಈ ಚುನಾವಣೆಗೆ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ತಲಾ 20 ಅಭ್ಯರ್ಥಿಗಳು ಮತ್ತು ಜೆಡಿಎಸ್‌ನಿಂದ 7 ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ಅಭ್ಯರ್ಥಿಗಳು ಸಲ್ಲಿಸಿ ರುವ ಪ್ರಮಾಣಪತ್ರದಲ್ಲಿ ತಮ್ಮ ಆಸ್ತಿ ವಿವರ ಪ್ರಕಟಿಸಿದ್ದು, ಬಹುತೇಕ ಎಲ್ಲರೂ ಕೋಟಿ ವೀರರು. ಕೊಡಗಿನ ಜೆಡಿಎಸ್ ಅಭ್ಯರ್ಥಿ ಒಬ್ಬರೇ ಕೇವಲ 3.50 ಲಕ್ಷ ರು. ಮೌಲ್ಯದ ಆಸ್ತಿ, 1 ಲಕ್ಷ ಸಾಲ ಹೊಂದಿರುವ ಬಡ ಅಭ್ಯರ್ಥಿ.

ಇನ್ನು ಕೋಲಾರದ ಕಾಂಗ್ರೆಸ್ ಅಭ್ಯರ್ಥಿ ಅನಿಲ್ ಕುಮಾರ್. ನಾಮಪತ್ರ ಸಲ್ಲಿಸುವ ವೇಳೆ ತಮ್ಮ ಮತ್ತು ಕುಟುಂಬದ ಹೆಸರಿನಲ್ಲಿ 79 ಲಕ್ಷ ರು. ಚರಾಸ್ತಿ, 34 ಲಕ್ಷ ರು. ಮೌಲ್ಯದ ಸ್ಥಿರಾಸ್ತಿ ಇರುವು ದಾಗಿ ಹೇಳಿಕೊಂಡಿದ್ದಾರೆ. ಕೈನಲ್ಲಿ 50 ಸಾವಿರ ನಗದು ಇಟ್ಟುಕೊಂಡು ಚುನಾವಣೆಗೆ ಇಳಿದಿದ್ದಾರೆ. ಬ್ಯಾಂಕ್ ಖಾತೆಯಲ್ಲಿ 13 ಸಾವಿರ ರು. ಇದ್ದು, ಎಲ್‌ಐಸಿಯ ವಿವಿಧ ಬಾಂಡ್‌ನಲ್ಲಿ 50 ಲಕ್ಷ ರು. ಇಟ್ಟಿದ್ದಾರೆ. 22 ಲಕ್ಷ ರು. ಮೌಲ್ಯದ ವಾಹನ, 79 ಲಕ್ಷ ರು. ಮೌಲ್ಯದ ಚರಾಸ್ತಿ ಹಾಗೂ 15 ಲಕ್ಷ ರು. ಮೌಲ್ಯದ ಕೃಷಿ ಭೂಮಿ ಹೊಂದಿದ್ದಾರೆ. ಆದರೆ, ಬೆಂಗಳೂರಿನ ಬ್ಯಾಂಕ್‌ನಲ್ಲಿ 2.63 ಕೋಟಿ ರು.ಸಾಲ ಇದೆ. ಪತ್ನಿ ಬಳಿ 20 ಸಾವಿರ ರು. ಇದ್ದು, 16 ಲಕ್ಷ ರು. ಮೌಲ್ಯದ 400 ಗ್ರಾಂ ಚಿನ್ನ, 29.47 ಲಕ್ಷ ರೂ ಕೃಷಿಯೇತರ ಭೂಮಿ ಹೊಂದಿದ್ದಾರೆ.

ಹಾಲಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅತಿ ಕಡಿಮೆ ಆದಾಯ ಹೊಂದಿರುವವರು. ಪತಿಗಿಂತ ಪತ್ನಿಯೇ ಶ್ರೀಮಂತೆ. ಕೋಟ ಶ್ರೀನಿವಾಸ ಪೂಜಾರಿ ಬಳಿ 36 ಲಕ್ಷ ರು. ಮೌಲ್ಯದ ಸ್ಥಿರಾಸ್ತಿ ಮತ್ತು 26,86 ಲಕ್ಷ ರು. ಮೌಲ್ಯದ ಚರಾಸ್ತಿ ಇದ್ದರೆ, ಪತ್ನಿ ಬಳಿ 1.37 ಕೋಟಿ ಮೌಲ್ಯದ ಸ್ಥಿರಾಸ್ತಿ, 7.41 ಲಕ್ಷ ರು. ಮೌಲ್ಯದ ಚರಾಸ್ತಿ, ಹಾಗೂ 40 ಲಕ್ಷ ರು. ಸಾಲ ಇದೆ. ಮೂವರು ಮಕ್ಕಳ ಒಟ್ಟು ಆಸ್ತಿ 21 ಲಕ್ಷ ರು.

ಇನ್ನುಳಿದಂತೆ ಬಹುತೇಕ ಅಭ್ಯರ್ಥಿಗಳು ತಮ್ಮ ಹಾಗೂ ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ಕನಿಷ್ಠ 5 ಕೋಟಿ ರು. ಆಸ್ತಿ ಇರುವುದಾಗಿ ಘೋಷಿಸಿ ಕೊಂಡಿದ್ದಾರೆ. ಬೆಂಜ್, ಆಡಿ, ರೇಂಜ್ ರಾಯ್ ಸೇರಿದಂತೆ ಐಷಾರಾಮಿ ಕಾರುಗಳ ಪಟ್ಟಿ ಹೊಂದಿ ರುವ ಅಭ್ಯರ್ಥಿಗಳ ಪಟ್ಟಿಯೂ ದೊಡ್ಡದಿದೆ.

ರಾಜದಲ್ಲೇ ಶ್ರೀಮಂತ

ಇಷ್ಟು ದಿನ 1200 ಕೋಟಿ ರು. ಆಸ್ತಿ ಘೋಷಿಸಿಕೊಂಡಿದ್ದ ಎಂ.ಟಿ.ಬಿ ನಾಗರಾಜ್ ಅವರನ್ನು ಬೆಂಗಳೂರು ನಗರದ ಕಾಂಗ್ರೆಸ್ ಅಭ್ಯರ್ಥಿ ಯುಸೂಫ್ ಷರೀಫ್ ಮೀರಿಸಿ ದ್ದಾರೆ. ಪ್ರಮಾಣಪತ್ರ ಸಲ್ಲಿಸುವ ವೇಳೆ ನೀಡಿರುವ ಆಸ್ತಿ ವಿವರ ಪ್ರಮಾಣಪತ್ರದಲ್ಲಿ ತಾವು 1743 ಕೋಟಿ ರು. ಆಸ್ತಿಯ ಒಡೆಯ ಎಂದು ಹೇಳಿಕೊಂಡಿದ್ದಾರೆ.

ಮನೆಯೇ ಇಲ್ಲ

ಕೊಡಗಿನ ಜೆಡಿಎಸ್ ಅಭ್ಯರ್ಥಿ ಎಚ್.ಎಸ್. ಇಸಾಕ್‌ಖಾನ್ ಬಳಿ ಸ್ವಂತ ಮನೆಯೇ ಇಲ್ಲ. ಇವರ ಬಳಿ 1 ಲಕ್ಷ ನಗದು, ಪತ್ನಿ ಬಳಿ 20 ಸಾವಿರ ರು. ನಗದು ಇದೆ. ಇಬ್ಬರ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಒಟ್ಟು 7 ಸಾವಿರ ರು. ಠೇವಣಿ ಇದೆ. ಇಸಾಕ್ ಖಾನ್ ಬಳಿ ಯಾವುದೇ ವಾಹನವಾಗಲಿ, ಆಭರಣ ಇಲ್ಲ. ಪತ್ನಿಯ ಬಳಿ 35 ಸಾವಿರ ರು. ಮೌಲ್ಯದ ದ್ವಿಚಕ್ರ ವಾಹನ, 3 ಲಕ್ಷ ರು. ಮೌಲ್ಯದ ಚಿನ್ನಾಭರಣ ಇದೆ.

ರಾಜಕಾಲುವೆ ಕಾಮಗಾರಿ ಜನವರಿ ಒಳಗೆ ಮುಗಿಸಿ

ಬೆಂಗಳೂರು: ನಗರ ವ್ಯಾಪ್ತಿಯ ಸುಮಾರು 30 ಕಿ.ಮೀ ರಾಜಕಾಲುವೆ ಕಾಮಗಾರಿಯನ್ನು ಜನವರಿ ಅಂತ್ಯಕ್ಕೆ ಪೂರ್ಣಗೊಳಿಸುವಂತೆ ಸಿಎಂ ಬೊಮ್ಮಾಯಿ ಅವರು ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಬಿಬಿಎಂಪಿ ಕಚೇರಿಯಲ್ಲಿ ಬೃಹತ್ ಕಾಲುವೆಗಳ ಕುರಿರು ಅಧಿಕಾರಿಗಳ ಸಭೆ ನಡೆಸಿ, ಜನವರಿ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ತಾಕೀತು ಮಾಡಿದರು. ಅತಿ ಹೆಚ್ಚು ಮಳೆಯಾಗಿರುವ ಹಿನ್ನೆಲೆಯಲ್ಲಿ ತಗ್ಗು ಪ್ರದೇಶಗಳಲ್ಲಿ ನೀರು ಮನೆಗಳಿಗೆ ನುಗ್ಗಿದೆ. ಕೆರೆ ಕೆಳಗೆ ಇರುವ ರಾಜಕಾಲುವೆ ದುರಸ್ತಿ ಮಾಡಿ, ಅದರ ನೀರಿನ ಸಾಗಣೆ ಸಾಮರ್ಥ್ಯ ಹೆಚ್ಚಿಸಬೇಕು ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ರಾಜಕಾಲುವೆಗಳ ಕಲ್ಲಿನ ಕಟ್ಟಡಗಳನ್ನು ಆರ್‌ಸಿಸಿ ಕಟ್ಟಡಗಳಿಗೆ ಪರಿವರ್ತಿಸಬೇಕು. ಹೊರವಲಯದ ಗ್ರಾಮೀಣ ಪ್ರದೇಶಗಳಲ್ಲಿ ಮಣ್ಣಿನ ಕಾಲುವೆಗಳಿವೆ. 110 ಗ್ರಾಮಗಳಲ್ಲಿ ಆರ್‌ಸಿಸಿ ಕಾಲುವೆ ನಿರ್ಮಿಸಿ, ಅವುಗಳ ಅಗಲ ವಿಸ್ತರಿಸಬೇಕು. ಅಲ್ಲಲ್ಲಿ ಇರುವ ಅಡಚಣೆ ತೆರವು ಮಾಡಲು ವಿಶೇಷ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಒತ್ತುವರಿ ತೆರವಿಗೆ ಆದೇಶ: ನಗರದಲ್ಲಿ 2626 ಒತ್ತುವರಿ ಪ್ರಕರಣಗಳನ್ನು ಗುರುತಿಸಲಾಗಿದೆ. ಅದರಲ್ಲಿ 1480 ತೆರವುಗೊಳಿಸಿದ್ದಾರೆ, 714 ತೆರವಿಗೆ ಬಾಕಿಯಿದೆ. ಕಾನೂನು ಬದ್ಧವಾಗಿ ಒತ್ತುವರಿ ತೆರವು ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಬಡವರಿಗೆ ತೊಂದರೆ ಕೊಡಬೇಡಿ ಅವರಿಗೆ ಸ್ಥಳಾಂತರಕ್ಕೆ ಸಮಯ ನೀಡುವಂತೆ ಸೂಚಿಸಲಾಗಿದೆ ಎಂದು ಸಿಎಂ ಬೊಮ್ಮಾಯಿ ತಿಳಿಸಿದರು.